


2011ರ ವಿಶ್ವಕಪ್ ಟ್ರೋಫಿ ಎತ್ತಿ ಹಿಡಿದು ಆಟಗಾರರ ಸಂಭ್ರಮ

ನಿರಾಸೆ ಅನುಭವಿಸಿದೆ. ಟಿ–20 ವಿಶ್ವಕಪ್‌ನಲ್ಲಿ 2014ರಲ್ಲಿ ಫೈನಲ್‌ನಲ್ಲಿ, 2016ರಲ್ಲಿ ಮತ್ತು 2022ರಲ್ಲಿ ಸೆಮಿಫೈನಲ್‌ನಲ್ಲಿ ತನ್ನ ಹೋರಾಟ ಕೊನೆಗೊಳಿಸಿತ್ತು.

ಹಿಂದಿನ ವಿಶ್ವಕಪ್‌ಗೆ ಹೋಲಿಸಿದರೆ ಈ ನಾಲ್ಕು ವರ್ಷಗಳ ಅವಧಿಯಲ್ಲಿ ಭಾರತ ತಂಡದಲ್ಲಿ ಅನೇಕ ಬದಲಾವಣೆಗಳಾಗಿವೆ. ಅನುಭವಿಗಳ ಜಾಗವನ್ನು ಹಲವು ಯುವ ಆಟಗಾರರು ತುಂಬಿ ಭರವಸೆ ಮೂಡಿಸಿದ್ದಾರೆ. ಶಿಖರ್ ಧವನ್ ಬದಲು ಶುಭಮನ್ ಗಿಲ್, ವಿಜಯ ಶಂಕರ್ ಅಥವಾ ರಿಷಬ್ ಪಂಥ್ ಬದಲು ಶ್ರೇಯಸ್ ಅಯ್ಯರ್, ಮಹೇಂದ್ರ ಸಿಂಗ್ ಧೋನಿ ನಿರ್ವಹಿಸುತ್ತಿದ್ದ ವಿಕೆಟ್ ಕೀಪಿಂಗ್ ಜವಾಬ್ದಾರಿಗೆ ಇಶಾನ್ ಕಿಶನ್, ದಿನೇಶ್ ಕಾರ್ತಿಕ್‌ಗೆ ಪರ್ಯಾಯವಾಗಿ ಸೂರ್ಯಕುಮಾರ್ ಯಾದವ್, ವೇಗಿ ಭುವನೇಶ್ವರ ಕುಮಾರ್ ಬದಲು ಮೊಹಮ್ಮದ್ ಸಿರಾಜ್, ಕೇದಾರ್ ಜಾಧವ್ ಬದಲಾಗಿ ಶಾರ್ದೂಲ್ ಠಾಕೂರ್ ಅವರಿಗೆ ತಮ್ಮ ಸಾಮರ್ಥ್ಯ ಸಾಬೀತು ಮಾಡುವ ಸವಾಲಿದೆ.

ಏಷ್ಯಾಕಪ್‌ನಲ್ಲಿನ ಯಶಸ್ಸಿನಿಂದಾಗಿ ಭಾರತ ಒಂದಷ್ಟು ಸಕಾರಾತ್ಮಕ ಅಂಶಗಳನ್ನು ಕಂಡುಕೊಂಡಿದೆ. ಭಾರತದ ಬ್ಯಾಟಿಂಗ್ ಭರವಸೆಯಾಗಿ ಹೊರಹೊಮ್ಮಿರುವ ಶುಭಮನ್ ಪಾಲಿಗೆ ಇದು ಮೊದಲ ವಿಶ್ವಕಪ್. ಇವರ ತಂದೆ ಲಕ್ವಿಂದರ್ ಅವರಿಗೆ ಕ್ರಿಕೆಟ್‌ನಲ್ಲಿ ದೊಡ್ಡ ಸಾಧನೆ ಮಾಡಬೇಕು ಎನ್ನುವ ಆಸೆ. ಬದುಕಿನ ಏರಿಳಿತಗಳ ಕಾರಣಗಳಿಂದಾಗಿ ಅದು ಸಾಧ್ಯವಾಗಲಿಲ್ಲ. ಮಗನ ಮೂಲಕವಾದರೂ ತಮ್ಮ ಆಸೆ ಈಡೇರಿಸಿಕೊಳ್ಳಲು ಮೂಲತಃ ಕೃಷಿಕರಾದ ಲಕ್ವಿಂದರ್ ತಮ್ಮ ಹೊಲದಲ್ಲಿಯೇ ಕ್ರೀಡಾಂಗಣ ನಿರ್ಮಿಸಿ ಮಗನ ಅಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟರು.

ಅಪ್ಪನ ಬೆಂಬಲದೊಂದಿಗೆ ಬೆಳೆದ ಶುಭಮನ್ 19 ವರ್ಷದೊಳಗಿನವರ ಭಾರತ ತಂಡಕ್ಕೆ ಉಪನಾಯಕರಾಗಿದ್ದರು. 2018ರ ಇದೇ ವಯೋಮಾನದ ವಿಶ್ವಕಪ್‌ನಲ್ಲಿ ಟೂರ್ನಿ ಶ್ರೇಷ್ಠ ಆಟಗಾರ ಪ್ರಶಸ್ತಿ ಪಡೆದಿದ್ದರು. ಸ್ನೇಹಿತರ ವಲಯದಲ್ಲಿ 'ದ ಪ್ರಿನ್ಸ್' ಎಂದೇ ಖ್ಯಾತರಾದ ಶುಭಮನ್ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ದ್ವಿಶತಕ ಬಾರಿಸಿದ ಕಿರಿಯ ಆಟಗಾರ ಎನಿಸಿದ್ದಾರೆ. ಅಂತರರಾಷ್ಟ್ರೀಯ ಟಿ–20ಯಲ್ಲಿ ವೈಯಕ್ತಿಕ ಗರಿಷ್ಠ ಸ್ಕೋರು ಗಳಿಸಿದ ಭಾರತದ ಆಟಗಾರರ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ. 33 ಏಕದಿನ ಪಂದ್ಯಗಳಿಂದ ಎಂಟು ಅರ್ಧಶತಕ, ಐದು ಶತಕಗಳು ಸೇರಿದಂತೆ 1704 ರನ್ ಗಳಿಸಿದ್ದಾರೆ. ರನ್ ಹೊಳೆ ಹರಿಸುತ್ತಿರುವ ಆಟಗಾರನಿಗೆ ಮೊದಲ ಬಾರಿಗೆ ವಿಶ್ವಕಪ್ ತಂಡದಲ್ಲಿ ಅವಕಾಶ ಲಭಿಸಿದೆ.

ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ವಿಭಾಗಕ್ಕೆ ಇಶಾನ್ ಕಿಶನ್ ಮತ್ತು ಹಾರ್ದಿಕ್ ಪಾಂಡ್ಯ ಶಕ್ತಿಯಂತಿದ್ದಾರೆ. ಒತ್ತಡವನ್ನು ನಿರ್ವಹಿಸಿ ಆಡುವ ಕೌಶಲ ಇವರಲ್ಲಿದೆ. ಏಷ್ಯಾಕಪ್‌ನಲ್ಲಿ ಪಾಕಿಸ್ತಾನ ವಿರುದ್ಧದ ಇವರ 138 ರನ್‌ಗಳ ಜೊತೆಯಾಟ ಇದಕ್ಕೆ ಸಾಕ್ಷಿ. ಪಾಂಡ್ಯ ಆಲ್‌ರೌಂಡ್ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ವೇಗಿ ಜಸ್‌ಪ್ರೀತ್ ಬೂಮ್ರಾ ಅವರ ಲೈನ್, ಲೆಂಗ್ತ್ ಎಸೆತಗಳು ಮತ್ತು ಸ್ವಿಂಗ್ ಮಾಡುವ ಶೈಲಿ ಎದುರಾಳಿ ಬ್ಯಾಟ್ಸ್‌ಮನ್‌ಗಳನ್ನು ಇಕ್ಕಟ್ಟಿಗೆ ಸಿಲುಕಿಸಬಲ್ಲವು.




ಹಳೆಬೇರು: ವಿಶ್ವಕಪ್‌ಗೆ ವಿರಾಟ್ ಕೊಹ್ಲಿ ತಾಲೀಮು